ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಂ.ಸಿ.ಡಿ. ವಕೀಲರಿಂದಃ-

ನಾನು ಅವಿದ್ಯಾವಂತೆ. ಗೋವಿಂದಯ್ಯನವರು ನನ್ನ ಗಂಡ. ಅವರ ಕುಟುಂಬದ ಎಲ್ಲಾ ವಿಚಾರಗಳು ಗೊತ್ತು. ಗೋವಿಂದಯ್ಯನವರಿಗೆ ದಾವಾ ಆಸ್ತಿಗಳು ಮತ್ತು ಇನ್ನಿತರ ಆಸ್ತಿಗಳು ಅವರ ಸಹೋದರರ ಭಾಗಕ್ಕೆ ಬಂದ ಸ್ವತ್ತುಗಳು ಎಂದರೆ ಸರಿ. ಗೋವಿಂದಯ್ಯನವರ ಭಾಗದಿಂದ ಸ್ವತ್ತುಗಳಲ್ಲಿ ಅವರೇ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿ. ಗೋವಿಂದಯ್ಯನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆಯ ಹೆಂಡತಿ ಕಾಂತಮ್ಮ ಮತ್ತು 2ನೇ ಹೆಂಡತಿ ನಾನು ಎಂದರೆ ಸರಿ. ಕಾಂತಮ್ಮನವರಿಗೆ 2 ಮತ್ತು 3ನೇ ಪ್ರತಿವಾದಿ ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ನನಗೆ 2 ಮತ್ತು 3ನೇ ವಾದಿಗಳು ಮಕ್ಕಳು ಎಂದರೆ ಸರಿ. ಗೋವಿಂದಯ್ಯನವರು 1987ರಲ್ಲಿ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗೋವಿಂದಯ್ಯನವರಿಗೆ 2 ಮತ್ತು 3ನೇ ಪ್ರತಿವಾದಿ ಮತ್ತು 2 ಮತ್ತು 3ನೇ ವಾದಿಗಳನ್ನು ಹೊರತುಪಡಿಸಿ ಬೇರೆ ಯಾರು ವಾರಸುದಾರರು ಇಲ್ಲ ಎಂದರೆ ಸರಿ.

ನಾನು ಮತ್ತು ಕಾಂತಮ್ಮ ಇಬ್ಬರು ಸೇರಿ ದಿನಾಂಕ 14.06.2005ರಂದು ನಾಗರಾಜು ರವರ ಹೆಂಡತಿಯ ಜಯಮ್ಮನವರಿಗೆ ಸರ್ವೆ ನಂಬರ್ 503ರಲ್ಲಿ 2 ಎಕರೆ 12 ಗುಂಟೆ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರ ಭಾಗವನ್ನು ಅವರು ಮಾರಾಟ ಮಾಡಿರುತ್ತಾರೆ ನನ್ನ ಹೆಸರನ್ನು ಸೇರಿಸಿದ್ದಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 503ರ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ಮಕ್ಕಳಾದ 2 ಮತ್ತು 3ನೇ ವಾದಿಗಳು ಸಹ ಒಪ್ಪಿಗೆ ಪತ್ರವನ್ನು ಸಹ ಜಯಮ್ಮನವರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

ಕಾಂತಮ್ಮ ಮತ್ತು ನಾನು ಸೇರಿ ಸರ್ವೇ ನಂಬರ್ 377/2ರ ಸ್ವತ್ತನ್ನು ದಿನಾಂಕ 31.07.2019ರಂದು ಸ್ವತ್ತನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರಕ್ಕೆ ಕಾಂತಮ್ಮನವರ ಮಗಳಾದ ಶಶಿಕಲಾ ಪಕ್ಷಗಾರರಾಗಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯ 2ನೇ ಪ್ರತಿವಾದಿಯಾದ ಶಶಿಕಲಾ ರವರು ಗೋವಿಂದಯ್ಯನವರ ಎಲ್ಲಾ ಸ್ವತ್ತುಗಳನ್ನು ಮತ್ತು ಮಾರಾಟ ಮಾಡಿರುವ ಸ್ವತ್ತುಗಳನ್ನು ಸೇರಿಸಿ ಭಾಗಾಂಶ ಕೋರಿ ಓ.ಎಸ್. 157/2005ರಂತೆ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಓ.ಎಸ್. 157/2005ರ ದಾವೆಯನ್ನು ಪ್ರಸ್ತುತ ದಾವೆಯ 2ನೇ ಪ್ರತಿವಾದಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್. 157/2005ರ ದಾವೆಯಲ್ಲಿ ಶಶಿಕಲಾರವರು ಅವರ ತಾಯಿ, ತಂಗಿ ಮತ್ತು ನನ್ನನ್ನು ಹಾಗೂ ನನ್ನ ಮಕ್ಕಳನ್ನು ಸೇರಿಸಿ ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅವರವರ ಭಾಗವನ್ನು ಅವರು ತೆಗೆದುಕೊಂಡಿದ್ದಾರೆ ಆದರೆ ನಮ್ಮ ಹೆಸರಿನಲ್ಲಿ ಇರುವ ಸ್ವತ್ತಿಗೆ ಭಾಗ ಕೋಡಿ ಎಂದು ಬಂದಿರುತ್ತಾರೆ. ಓ.ಎಸ್. 157/2005ರ ದಾವೆಯಲ್ಲಿ ನನಗೆ ಮತ್ತು ನನ್ನ ಮಕ್ಕಳುಗಳಿಗೆ ನೋಟಿಸು ಬಂದಿತ್ತು ಎಂದರೆ ಸರಿಯಲ್ಲ. ಓ.ಎಸ್. 157/2005ರ ದಾವೆಯಲ್ಲಿ ರಾಜಿ ಮಾಡಿಕೊಂಡು ಸರ್ವೇ ನಂಬರ್ 503ರಲ್ಲಿ 2 ಎಕರೆ 11 ಗುಂಟೆ ಪೈಕಿ 16 ಗುಂಟೆ ಸ್ವತ್ತನ್ನು ಶಶಿಕಲಾರವರ ಭಾಗಕ್ಕೆ ಕೊಟ್ಟಿದ್ದೇವೆ ಎಂದರೆ ಸರಿ. ಅದೇ ರೀತಿ ಹಳೆ ಸರ್ವೇ ನಂಬರ್ 179/1 ಹೊಸ ಸರ್ವೇ ನಂಬರ್ 179/5ರಲ್ಲಿ 6 ಗುಂಟೆ ಸ್ವತ್ತು ಸನ ರಾಜಿ ಮೂಲಕ ಶಶಿಕಲಾಗೆ ಎಲ್ಲರೂ ಸೇರಿ ಕೊಟ್ಟಿದ್ದೇವೆ ಎಂದರೆ ಸರಿ. ಅದೇ ರೀತಿ ರಾಜಿ ಪತ್ರದ ಪ್ರಕಾರ ನನಗೆ ಸರ್ವೇ ನಂಬರ್ 338ರಲ್ಲಿ 1 ಎಕರೆ 15 ಗುಂಟೆ ಮತ್ತು ಒಂದು ಸೈಟು ಭಾಗಕ್ಕೆ ಕೊಟ್ಟಿರುತ್ತಾರೆ ಎಂದರೆ ಸರಿ. ಓ.ಎಸ್. 157/2005ರ ದಾವೆಯಲ್ಲಿ ಸರ್ವೇ ನಂಬರ್ 348/1ರ ಸತ್ತನ್ನು ಐಟಂ-5ರ ಸ್ವತ್ತಾಗಿ ಸೇರಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್. 157/2005ರ ದಾವೆಯ

ಐಟಂ-5ರ ಸ್ವತ್ತು ಸರ್ವೇ ನಂಬರ್ 348/1ರಲ್ಲಿ 1 ಎಕರೆ 39 ಗುಂಟೆ ಸ್ವತ್ತಿಗೆ ಯಾವುದೇ ರಾಜಿ ಮಾಡಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಯಾವುದೇ ಭಾಗ ಮಾಡಿಕೊಂಡಿಲ್ಲ ನನಗೆ ಯಾವುದೇ ನೋಟಿಸು ಬಂದಿಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂಬರ 348/1ರ ಆಸ್ತಿಗೆ ಸಂಬಧಿಸಿದಂತೆ ಓ.ಎಸ್. 157/2005ರ ದಾವೆಯಲ್ಲಿ ರಾಜಿ ಆಗಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯ 13ನೇ ಪ್ರತಿವಾದಿಗೆ ಸರ್ವೇ ನಂಬರ 348/1ರಲ್ಲಿ 1 ಎಕರೆ 39 ಗುಂಟೆಯನ್ನು ಮಾರಾಟ ಮಾಡಿದ್ದರಿಂದ ಓ.ಎಸ್. 157/2005ರ ದಾವೆಯ ರಾಜಿ ಪತ್ರದಲ್ಲಿ ತೋರಿಸಿರಲಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲದೆ ಮಾರಾಟ ಮಾಡಿಕೊಂಡಿದ್ದಾರೆ ನಾವು ಹೊಲ ಮಾಡಲು ಹೋದಾಗ ಮಾತ್ರ ತಿಳಿದಿರುತ್ತದೆ ಪೂರ್ಜರಿ ಮಾಡಿರುತ್ತಾರೆ ಎಂದುನು ಡಿಯುತ್ತಾರ.

ಪೂರ್ಜರಿ ಮಾಡಿದ್ದಾರೆ ಎಂದು 13ನೇ ಪ್ರತಿವಾದಿರವರಿಗೆ ನೋಟಿಸು ನೀಡಿರುತ್ತೇವೆ. ಈ ವಿಚಾರವನ್ನು ನಾನು ನನ್ನ ದಾವೆಯಲ್ಲಿ ಹೇಳಿರುತ್ತೇನೆ. 13ನೇ ಪ್ರತಿವಾದಿ ರವರ ಮಾರಾಟ ಮಾಡಿರುವ ಕ್ರಯ ಪತ್ರವನ್ನು ಪ್ರಶ್ನಿಸಿ 2ನೇ ಪ್ರತಿವಾದಿ ಶಶಿಕಲಾರವರು ಓ.ಎಸ್. 13/2008ರಂತೆ ದಾವೆಯುನ್ನು ನನ್ನ ಕುಟುಂಬದವರನ್ನು ಸೇರಿಸಿ ಕೇಸು ದಾಖಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುುತ್ತಾರೆ. ಓ.ಎಸ್. 13/2008ರ ದಾವೆ ಚಾಲ್ತಿಯಲ್ಲಿ ಇದ್ದ ಕಾರಣ ಅದರ ಸ್ವತ್ತನ್ನು ಓ.ಎಸ್. 157/2005ರ ದಾವೆಯ ರಾಜಿ ಪತ್ರದಲ್ಲಿ ತೋರಿಸಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ವಿಚಾರವನ್ನು ಓ.ಎಸ್. 157/2005ರ ದಾವೆಯ ರಾಜಿ ಪತ್ರದಲ್ಲಿ ನಮೂದನೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್. 157/2005ರ ದಾವೆಯಲ್ಲಿ ವಾದಿಯರು ಪಕ್ಷಗಾರರಾಗಿದ್ದರೂ ಸಹ ಪಕ್ಷಗಾರರಾಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನನಗೆ

ಗೊತ್ತಿಲ್ಲ ಎಂದು ನುಡಿದು ರಾಜಿ ಸಂದಾನೆ ಮಾಡಿರುವುದು ನಿಜ ಆದರೆ ಇವರು ಮೋಸ ಮಾಡುತ್ತಾರೆ ಎಂದು ನನಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ರಾಜಿ ಸಂದಾನವನ್ನು ಪ್ರಶ್ನಿ ಮೇಲ್ಮನವಿ ಸಲ್ಲಿಸಿಲ್ಲ. ಓ.ಎಸ್. 157/2005ರ ದಾವೆಯಲ್ಲಿ ರಾಜಿ ಮಾಡಿಕೊಂಡಾಗ ಓ.ಎಸ್ 13/2008ರ ದಾವೆ ಚಾಲ್ತಿಯಲ್ಲಿ ಇರುವ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಿನಾಂಕ 30.07.2011ರಂದು ಓ.ಎಸ್ 13/2008 ಡಿಕ್ರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಓ.ಎಸ್ 13/2008ರ ದಾವೆಯ ಡಿಕ್ರಿಯ ವಿರುದ್ಧ ಯಾವುದೇ ಮೇಲ್ಮನವಿಯನ್ನು ನಾನು ಇಲ್ಲಿಯವರೆಗೂ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಓ.ಎಸ್ 157/2005 ಮತ್ತು 13/2008ದಾ ಎರಡೂ ದಾವೆಯಲ್ಲಿ ನಾವು ಪಕ್ಷಗಾರರಾಗಿರುವ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ, ಓ.ಎಸ್ 157/2005 ಮತ್ತು 13/2008 ಎರಡೂ ದಾವೆ ವಿಚಾರಗಳನ್ನು ಪ್ರಸ್ತುತ ದಾವೆಯಲ್ಲಿ ಬರೆಸಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಸ್ತುತ ದಾವೆಯಲ್ಲಿ ಸರ್ವೇ ನಂಬರ್ 348/1ರ ಸ್ವತ್ತಿಗೆ ಮಾತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನಾನು ಪಂಚಾಯಿತಿ ಪಾರಿಕತ್ ಪ್ರಕಾರ ಸ್ವಾಧೀನದಲ್ಲಿ ಇರುತ್ತೇನೆ ಎಂದು ತೋರಿಸಲು ಕಂದಾಯ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆಸಂಬಂಧಿಸಿದಂತೆ ನಾನು ಯಾವುದೇ ಕಂದಾಯ ಪಾವತಿಸಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ದಿನಾಂಕ 14.06.1992ರಂದು ಆದ ಪಂಚಾಯಿತಿ ಪಾರಿಕತ್ ಆಗಿದೆ ಎಂಬ ವಿಚಾವರವನ್ನು ಓ.ಎಸ್ 157/2005 ಮತ್ತು 13/2008 ಎರಡೂ ದಾವೆಗಳಲ್ಲಿ ಹೇಳಿಲ್ಲ ಎಂದರೆ ಸರಿ. ಓ.ಎಸ್ 157/2005 ಮತ್ತು 13/2008 ಎರಡೂ ದಾವೆಗಳಲ್ಲಿ ದಿನಾಂಕ 14.06.1992ರಂದು

ಆದ ಪಂಚಾಯಿತಿ ಪಾರಿಕತ್ ನ್ನು ಹಾಜರುಪಡಿಸಿಸಲು ನನಗೆ ತೊಂದರೆ ಇರಲ್ಲಿ ಎಂದರೆ ಸಾಕ್ಷಿ ನನಗೆ ತೊಂದರೆ ಇತ್ತು ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ಈ ವಿಚಾರವನ್ನು ಪ್ರಸ್ತುತ ದಾವೆಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ಓ.ಎಸ್. 157/2005ರ ದಾವೆಯಲ್ಲಿ ನನ್ನ ಮಗ ವಿನಯ್ ಕುಮಾರ್ ರವರು ಪ್ರತ್ಯೇಕವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ, ನನ್ನ ಮಗ ಸಲ್ಲಿಸಿರುವ ಲಿಖಿತ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ, ಓ.ಎಸ್. 157/2005ರ ದಾವೆಯ ರಾಜಿ ಪತ್ರದ ಪ್ರಕಾರ ಬಂದ ಸ್ವತ್ತಿಗೆ ನಾನು ಡಿಕ್ರಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಆ ಪ್ರಕಾರ ನಾನು ಕಂದಾಯ ದಾಖಲೆಗಳನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕ 05.06.2023ರಂದು ಜಗದೀಶ್ ರವರ ಹೆಂಡತಿಗೆ ರಾಜಿ ಪತ್ರದ ಮೂಲಕ ಬಂದಸ್ವತ್ತನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಆ ಪ್ರಕಾರ ಖಾತೆ ಸಹ ಅವರ ಹೆಸರಿಗೆ ಬದಲಾವಣೆಯಾಗಿದೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ದಿನಾಂಕ 14.06.1992ರಂದು ಆದ ಪಂಚಾಯಿತಿ ಪಾರಿಕತ್ ಪ್ರಕಾರ ದಾವಾ ಆಸ್ತಿ ನನ್ನ ಭಾಗಕ್ಕೆ ಬಂದಿದೆ ಎಂದು ಇದೇ ಮೊದಲ ಬಾರಿಗ ಹೇಳುತ್ತಿದ್ದೇನೆ. ನಾನು ಪಂಚಾಯಿತಿ ಪಾರಿಕತ್ ಅನ್ನು ಸೃಷ್ಟಿಸಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳುದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಗೋವಿಂದಯ್ಯನ ಇಬ್ಬರು ಹೆಂಡತಿಯವರಿಗೆ ಮತ್ತು ಅವರು ಮಕ್ಕಳ ಮಧ್ಯೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಭಾಗವಾದ ಬಗ್ಗೆ ಯಾವುದೇ ರೆವಿನ್ಯೂ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಪಂಚಾಯಿತಿ ಪಾರಿಕತ್ ಪ್ರಕಾರ ಯಾರು ಸಹ ಸ್ವಾ ಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ, ನಾನು ಹಾಜರುಪಡಿಸಿರು ದಾಖಲೆಗಳ ಬಗ್ಗೆ ನನಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನಮ್ಮ ವಕೀಲರು ಹೇಳುತ್ತಾರೆ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.